## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | ಫಯಾಜ್ | |
| ತಂದೆಯ ಹೆಸರು | ಸೈಯದ ಪೀರ | ಸಾಕ್ಷಿಗೆ ದಿಃ **01.06.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 48 ವರ್ಷ | |
| ಉದ್ಯೋಗ | ಕಾಖಾನೆಯಲ್ಲಿ ಕೆಲಸ | ಪಿ.ಡಬ್ಲ್ಯೂ **-08** |
| ವಾಸ ಸ್ಥಳ | ಗೌಸಿಯಾನಗರ ಮೈಸೂರು | ಸಿ.ಡಬ್ಲ್ಯೂ **-07** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಮೃತ ರೇಷ್ಮಬಾನು ನನ್ನ ಅಕ್ಕನ ಮಗಳು ಇದ್ದಳು, ಆರೋಪಿತನು ರೇಷ್ಮಬಾನು ಇವಳ ಗಂಡ ಇರುತ್ತಾನೆ. ಚಾಸ-16 ನೌಷದ ಈತನು ಆರೋಪಿತನಿಗೆ ತಮ್ಮನಾಗಬೇಕು. ರೇಷ್ಮಬಾನು ಇವಳು ಗಾಯತ್ರಿಪುರಂ ನಲ್ಲಿ ಇರುವ ಮನೆಯಲ್ಲಿ ಮೃತಪಟ್ಟಿರುತ್ತಾಳೆ. ಸದರಿ ಮನೆಗೆ ಅವರು ವಾಸಮಾಡಲು ಬಂದು 2 ದಿವಸ ಆಗಿತ್ತು. ಗಾಯತ್ರಿಪುರಂ ನಲ್ಲಿ ಇರುವ ಮನೆಯಲ್ಲಿ ರೇಷ್ಮಬಾನು ಮತ್ತು ಅವಳ ಗಂಡ ವಾಸವಾಗಿದ್ದರು. ಅವರಿಗೆ 3 ಜನ ಮಕ್ಕಳು ಇದ್ದರು.

ದಿಃ 25.07.2019 ರಂದು ರೇಷ್ಮಬಾನು ಇವಳ ಕೊಲೆ ಆಗಿ ಮೃತಪಟ್ಟಿದ್ದಳು, ನಾನು ಕೆಲಸಕ್ಕೆ ಹೋದಾಗ ನಮ್ಮ ಅಕ್ಕನ ಮಗ ಕೊಲೆ ಆದ ಬಗ್ಗೆ ತಿಳಿಸಿದರು. ನಾನು ವಿಷಯ ತಿಳಿದ ನಂತರ ಗಾಯತ್ರಿಪುರಂ ನಲ್ಲಿ ಇರುವ ಮನೆಗೆ ಬಂದು ರೇಷ್ಮಬಾನು ಇವಳ ಶವವನ್ನು ನೋಡಿರುತ್ತೇನೆ, ಅವಳಿಗೆ ಕುತ್ತಿಗೆ ಮತ್ತು ಪಕ್ಕೆಗೆ ಗಾಯವಾಗಿತ್ತು. ಗಾಯತ್ರಿಪುರಂ ನಲ್ಲಿ ಇರುವ ಮನೆಗೆ ರೇಷ್ಮಬಾನು ಮತ್ತು ಅವಳ ಗಂಡ ವಾಸಮಾಡಲು ಬರುವುದಕ್ಕಿಂತ ಮೊದಲು ಅವರು ಕ್ಯಾತಮಾರನ ಹಳ್ಳಿಯಲ್ಲಿ ಇರುವ ರೇಷ್ಮಬಾನು ಇವರ ತಂದೆ-ತಾಯಿ ಮನೆಯಲ್ಲಿ ವಾಸವಾಗಿದ್ದರು. ಗಂಡ-ಹೆಂಡತಿ ಮೊದಲು ಚೆನ್ನಾಗಿ ಇದ್ದರು ನಂತರ ಏನು

ಆಯಿತು ಎಂದು ನನಗೆ ಗೊತ್ತಿಲ್ಲ. ರೇಷ್ಮಬಾನು ಇವರನ್ನು ಯಾರು ಕೊಲೆ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಗಂಡ-ಹೆಂಡತಿಯ ಮಧ್ಯೆ ಸಂಬಂಧ ಯಾವ ರೀತಿ ಇತ್ತು ಎಂದು ನನಗೆ ಗೊತ್ತಿಲ್ಲ. ಈ ವಿಷಯವನ್ನು ಬಿಟ್ಟರೇ ನನಗೆ ಬೇರೆ ಯಾವ ವಿಷಯವೊ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

ಈಗೆ 2 ವರ್ಷಗಳ ಹಿಂದೆ ಆರೋಪಿ ಈತನು ತನ್ನ ಹೆಂಡತಿಯು ತನ್ನ ತಮ್ಮ, ನೌಷಾದ ಜೊತೆ ಅನೈತಿಕ ಸಂಬಂಧ ಹೊಂದಿದ್ದಾಳೆ ಎಂದು ಪದೇ ಪದೇ ಗಲಾಟೆ ಮಾಡುತ್ತಿದ್ದ ಎಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮೇಲ್ಕಂಡ ವಿಷಯಕ್ಕೆ ಗಲಾಟೆ ಆಗಿ ಪಂಚಾಯ್ತಿ ಆಗಿ ಹೆಂಡತಿ-ಮಕ್ಕಳನ್ನು ಕರೆದುಕೊಂಡು ಹೋಗಿ ಗಾಯತ್ರಿಪುರಂ ನಲ್ಲಿ ವಾಸವಾಗಿದ್ದನು ಎಂದರೆ ಸರಿಯಲ್ಲ. ದಿಃ 24.07.2019 ರಂದು ಆರೋಪಿ ನಂದಿಮ ಪಾಷ ಇವನು ಹೆಂಡತಿ ಜೊತೆಗೆ ಜಗಳ ಮಾಡಿಕೊಂಡು ತನ್ನ ಅತ್ತೆ ಮಾವನ ಮನೆಗೆ ಹೋಗಿ ನಿಮ್ಮ ಮಗಳನ್ನು ಚಾಕು ಹಾಕಿ ಕೊಲೆ ಮಾಡುತ್ತೇನೆ ಎಂದು ಗಲಾಟೆ ಮಾಡಿ ಅಲ್ಲೆ ಮಲಗಿಕೊಂಡು, ಬೆಳಿಗ್ಗೆ ಎದ್ದು ದಿಃ 25.07.2019 ರಂದು ಗಾಯತ್ರಿಪುರಂ ನಲ್ಲಿ ಇರುವ ಮನೆಗೆ ಬಂದು ತನ್ನ ಹೆಂಡತಿ ರೇಷ್ಮಬಾನುಳನ್ನು ಕೊಲೆ ಮಾಡಿ ಪರಾರಿಯಾಗಿದ್ದನು ಎಂದು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-</u>**

ಪಾಟೀಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು